ಮಾತನಾಡುವಾಗ ಮುಖ್ಯಮಂತ್ರಿಗಳು ಇದ್ದಿದ್ದರೆ ಇನ್ನೂ ಕೂಡ ಹೆಚ್ಚು ಸ್ಫೂರ್ತಿ ಬರುತ್ತಿತ್ತು, ನಾನು ಇನ್ನೂ ಹೆಚ್ಚು ಸಲಹೆಗಳನ್ನು ಕೊಡಬಹುದಾಗಿತ್ತು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ದಯಮಾಡಿ ನಾನು ನಿಮ್ಮ ಒಂದೇ ಒಂದು ಮಾತನ್ನು ಸ್ವಾಗತ ಮಾಡುತ್ತೇನೆ. ನೀವು contingency plan ಮಾಡುತ್ತಿದ್ದೇನೆ. short term ಸಮಸ್ಯೆಯಿಂದ ಹೊರಬರಬೇಕಾದರೆ ಏನು ಮಾಡಬೇಕೋ ಅದನ್ನು ಮಾಡಿದ್ದೇನೆಂದು ನೀವು ಹೇಳಿದಿರಿ. ಕನಿಷ್ಠ ನೀವು ಒಂದು ಸಾವಿರ ಮೆಗಾವ್ಯಾಟ್‌ನ್ನು ತೆಗೆದುಕೊಂಡು 6 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಈಗ ನಾಲ್ಕು ತಿಂಗಳು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಆಗತಕ್ಕಂಥ ರೀತಿಯಲ್ಲಿ ಮತ್ತು ಕತ್ತಲೆಯಲ್ಲಿರತಕ್ಕಂಥ ರೈತರಿಗೆ ಸಹಾಯ ಆಗತಕ್ಕಂಥ ರೀತಿಯಲ್ಲಿ ನಿರಂತರ ವಿದ್ಯುತ್‌ನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಬಹುಶ: ನಾವು ಇಲ್ಲಿ ಚರ್ಚೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**6. ಪ್ರಕಟಣೆ :**

**ವಿಷಯ :** ಮಾನ್ಯ ಸದಸ್ಯರುಗಳು ಸದನ ನಡೆಯುವಾಗ ಹಾಜರಾತಿ ಪುಸ್ತಕದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ 4–00 ಗಂಟೆಗೆ ಸಹಿ ಮಾಡುವ ಬಗ್ಗೆ.

**ಅಧ್ಯಕ್ಷರು** : ದಿನಾಂಕ: 25–02–2010ರಂದು ನಡೆದ ಕಾರ್ಯ ಕಲಾಪಗಳ ಸಲಹಾ ಸಮಿತಿಯ ಸಭೆಯ ಗಮನಕ್ಕೆ ತಂದಿರುವಂತೆ ಅಧಿವೇಶನ ಸಮಯದಲ್ಲಿ ಮಾನ್ಯ ಸದಸ್ಯರುಗಳು ಸದನದಲ್ಲಿ ಮಧ್ಯಾಹ್ನದ ನಂತರ ಹಾಜರಿಲ್ಲದಿರುವುದು ಸಾಮಾನ್ಯವಾಗಿದೆ. ಈ ಹಿನ್ನಲೆಯಲ್ಲಿ ಪ್ರತಿ ದಿವಸ ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡು ಬಾರಿ ಹಾಜರಾತಿಯನ್ನು ಕಡ್ಡಾಯಗೊಳಿಸುವುದು ಸೂಕ್ತವೆಂದು ಸಮಿತಿ ಸಭೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಆದಕಾರಣ ಮಾನ್ಯ ಸದಸ್ಯರುಗಳು ಬೆಳಿಗ್ಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದಲ್ಲದೆ ಮಧ್ಯಾಹ್ನ 4.00 ಗಂಟೆಗೂ ಸಹ

ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡತಕ್ಕದ್ದು. ಆಯಾಯ ಪಕ್ಷದ ಮುಖ್ಯ ಸಚೇತಕರುಗಳು ಮಾನ್ಯ ಸದಸ್ಯರ ಹಾಜರಾತಿಯ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂದು ಸೂಚಿಸಲಾಗಿದೆ. ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

**(ಮತ್ತೆ ಸದನವು ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

**7. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ:**

**ವಿಷಯ :** ರಾಜ್ಯದಲ್ಲಿ ಇತ್ತೀಚೆಗೆ ಉಂಟಾಗಿರುವ ತೀವ್ರ ವಿದ್ಯುತ್ ಸಮಸ್ಯೆಯ ಬಗ್ಗೆ.

**ಶ್ರೀ ಕರಡಿ ಸಂಗಣ್ಣ** (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಉಂಟಾಗಿರುವ ವಿದ್ಯುತ್ ಅಭಾವದ ವಿಷಯವಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನಮ್ಮ ರಾಜ್ಯ ಕಗ್ಗತ್ತಲೆಯಲ್ಲಿದ್ದು, ವಿದ್ಯುತ್ ಅಭಾವವನ್ನು ಎದುರಿಸುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ, ಏಕೆಂದರೆ ಹಿಂದೆ ಎಂದೂ ಕಂಡರಿಯದ ಇಂಥ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕೆ ಕಾರಣ ಏನೆಂಬ ಬಗ್ಗೆ ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು, ಶ್ರೀ ಕೆ.ಎಂ. ಶಿವಲಿಂಗೇಗೌಡರು, ಶ್ರೀ ಟಿ.ಬಿ. ಜಯಚಂದ್ರರವರು ಹಾಗೂ ಇತರ ಸದಸ್ಯರುಗಳು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಉತ್ಪಾದನೆಗೆ ಹಿಂದಿನ ಸರ್ಕಾರ ಆದ್ಯತೆ ಕೊಟ್ಟಿಲ್ಲ, ಹಿಂದಿನ ಸರ್ಕಾರ ಕೊಟ್ಟಿಲ್ಲವೆನ್ನುವ ಆದ್ಯತೆ ಬಗ್ಗೆ ನಾನು ಒತ್ತು ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಅಂಕಿ-ಅಂಶಗಳ ಮೂಲಕ ಸರ್ಕಾರ ಗಮನ ಸೆಳೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇವತ್ತು ರಾಜ್ಯದಲ್ಲಿ 2009-10ರಲ್ಲಿ 51 ದಶಲಕ್ಷ 19 ಸಾವಿರ ಯೂನಿಟ್ ಬೇಡಿಕೆ ಇದೆ. ಅದರೆ